# ಕೊರಗ ಜನಾಂಗ: ಪರಂಪರೆ ಮತ್ತು ಕೆಲವು ಐತಿಹ್ಯಗಳು

**ಆಶಾ[1] & ಮಾಧವ ಎಂ.ಕೆ.[2]**

[1]ಸಂಶೋಧನಾ ವಿದ್ಯಾರ್ಥಿ, ಎಸ್. ವಿ. ಪಿ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

[2]ಮಾರ್ಗದರ್ಶಕರು, ಸಹಾಯಕ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜು, ಮಂಗಳೂರು.

DOI: https://doi.org/10.5281/zenodo.16677339

## ABSTRACT:

ವೇದಕಾಲದಲ್ಲಿ ಮಾನವರೆಲ್ಲರೂ ಸಮಾನರಾಗಿದ್ದು ಅವರನ್ನು ಜಾತಿವ್ಯವಸ್ಥೆಯಿಂದ ಗುರುತಿಸುವ ಕ್ರಮ ಇರಲಿಲ್ಲ. ಮೇಲು ಕೀಳು, ಉಚ್ಚನೀಚವೆನ್ನುವ ಭೇದ–ಭಾವಗಳ ಕಲ್ಪನೆ ಆ ಕಾಲದಲ್ಲಿ ಇಲ್ಲವಾಗಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣ ವ್ಯವಸ್ಥೆ ವ್ಯಕ್ತಿವ್ಯವಸ್ಥೆಯಾಗಿತ್ತೇ ವಿನಾಃ ಅದು ಜಾತಿ ವ್ಯವಸ್ಥೆಯಾಗಿರಲಿಲ್ಲ ಎಂಬ ವಿಚಾರ ಗೀತೆಯ ವ್ಯಾಖ್ಯೆಯಿಂದ ತಿಳಿದು ಬರುತ್ತದೆ.

ಕ್ರಮೇಣ ಮುಂದೆ ಅದು ಒಂದೊಂದು ವೃತ್ತಿ ಪ್ರವೃತ್ತಿಯ ಗುಂಪುಗಳಾಗಿ ಒಬ್ಬರಿಂದ ಮತ್ತೊಬ್ಬರಿಗೆ ಪ್ರಬಲವಾದ ಪ್ರತಿಸ್ಪರ್ಧಿಯಾದಾಗ ಅದು ನಂತರದಲ್ಲಿ ಸಮುದಾಯ ವ್ಯವಸ್ಥೆಯಾಗಿ ರೂಪುಗೊಂಡು ಬಲಿಷ್ಠವಾಯಿತು ಎಂದು ನಂಬಲಾಗಿದೆ. ಆಗ ಆ ಪಂಗಡಗಳೊಳಗೆ ಪೈಪೋಟಿ ಏರ್ಪಟ್ಟು ಘರ್ಷಣೆ ನಡೆದು, ವಿಜಯಿ ಆದವರು ಸೋತವರನ್ನು ತಮ್ಮಿಂದ ಕೀಳು ಮಟ್ಟದವರಾಗಿ ಕಂಡು ಅವರ ಕಾಯಕವ್ಯವಸ್ಥೆಯೇ ಮುಂದೆ ಒಂದು ಸಮುದಾಯ ಎಂದು ಗುರುತಿಸಿಕೊಂಡು ಜಾತಿಯ ವ್ಯವಸ್ಥೆಯಾಗಿ ರೂಪು ಪಡೆಯಿತು ಎಂದು ಭಾವಿಸಲಾಗಿದೆ.

ಆರಂಭದಲ್ಲಿ ಆದಿಮ ಜನಾಂಗ ಅಲೆಮಾರಿಯಾಗಿ ಬೇಟೆಯಾಡುತ್ತಾ ಕಾಡುತ್ಪನ್ನಗಳನ್ನು ಆಹಾರ ಕ್ರಮವಾಗಿಸಿ ನಂತರದಲ್ಲಿ ವ್ಯವಸಾಯ ಪದ್ಧತಿಯೊಂದಿಗೆ ಒಂದುಕಡೆ ನೆಲೆಯೂರಿ ಬದುಕುಕಟ್ಟಿಕೊಂಡಿತು ಎಂಬುದು ವಾಸ್ತವ ಸಂಗತಿ. ನಂತರದಲ್ಲಿ ಅದು ಮುಂದುವರಿದು 'ಕೊಡುಕೊಳ್ಳುವಿಕೆ'ಯಿಂದ ವ್ಯಾಪಾರ ಪ್ರವೃತ್ತಿಯೂ ಬೆಳೆದುಬಂತು. ಹೀಗೆ ನೆಲೆನಿಂತ ಅನೇಕ ಪಂಗಡಗಳಲ್ಲಿ ಕೆಲವು ಪಂಗಡಗಳು ಕಾಡಿನಲ್ಲಿಯೇ ಉಳಿದು ಬಾಳು ನಿರ್ವಹಿಸಿದ ಕಾರಣವಾಗಿ ಸಮಾಜದ ಮುಖ್ಯವಾಹಿನಿಯಿಂದ ಹಿಂದುಳಿಯುವಂತಾಯಿತು.

ಹೀಗೆ ಉಳಿದ ಅಲಕ್ಷಿತ ಸಮುದಾಯಗಳಲ್ಲಿ 'ಕೊರಗ' ಸಮುದಾಯವು ಒಂದು. ಗಿರಿಜನ ವರ್ಗದಲ್ಲಿ ಗುರುತಿಸಿಕೊಳ್ಳುವ ಈ ಜನಾಂಗ ತಮ್ಮದೇ ಕಟ್ಟುಪಾಡುಗಳಲ್ಲಿ ಜೀವನ ನಡೆಸಿ ಬಾಳುವುದನ್ನು ಕಾಣಬಹುದು.

ಈ ಲೇಖನದಲ್ಲಿ 'ಕೊರಗ' ಪದನಿಷ್ಪತ್ತಿ, ಸಮುದಾಯದ ಮೂಲ, ಐತಿಹ್ಯ ಮತ್ತು ಅದಕ್ಕೆ ಸಂಬಂಧಿಸಿದ ಚಾರಿತ್ರಿಕ ವಿಚಾರಗಳನ್ನು ಚರ್ಚಿಸಲಾಗಿದೆ.

**KEYWORDS:**

ವರ್ಣಾಶ್ರಮ ಧರ್ಮ, ಕೊರಗ ಸಮುದಾಯ, ಕಾಯಕ, ಐತಿಹ್ಯಗಳು, ಸಾಮಾಜಿಕ ವ್ಯವಸ್ಥೆ.

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ವರ್ಣಾಶ್ರಮ ವ್ಯವಸ್ಥೆ ಯಾವಾಗ ಹುಟ್ಟಿಕೊಂಡಿತು ಎಂಬ ವಿಚಾರವನ್ನು ನಿಖರವಾಗಿ ದಾಖಲಿಸಲು ಸಾಧ್ಯವಾಗಿಲ್ಲ. ಆದರೆ ಭೂಲೋಕದ ಶ್ರೇಷ್ಠ ಆಧ್ಯಾತ್ಮಿಕ ಗ್ರಂಥ ಎಂಬ ಮನ್ನಣೆಗೆ ಪಾತ್ರವಾಗಿರುವ 'ಭಗವದ್ಗೀತಾ'ದಲ್ಲಿ ವರ್ಣಾಶ್ರಮವೆಂದರ "ದೇಹವು ಯಾವ ಪ್ರಕೃತಿಗುಣಗಳ ಪ್ರಭಾವದಲ್ಲಿದೆ ಅವುಗಳಿಗೆ ಅನುಗುಣವಾದ ಕರ್ತವ್ಯ" ('ಭಗವದ್ಗೀತಾ ಯಥಾರೂಪ; 2015, ಪು. 108) ಎಂಬ ವ್ಯಾಖ್ಯಾನವನ್ನು ಒಳಗೊಂಡಿದೆ. ಈ ಕಾರಣದಿಂದಾಗಿ 'ವರ್ಣಾಶ್ರಮ ಧರ್ಮ'ವು ಅನುಷ್ಠಾನದಲ್ಲಿ ಬಂದಿದೆಯೆಂದು ಗ್ರಂಥಸಮ್ಮತವಾಗಿ ತಿಳಿದು ಬರುತ್ತದೆ.

ನಂ. ತಪಸ್ವೀಕುಮಾರ್ ಅವರು "ಮನುಕುಲದ ಚರಿತ್ರೆಗೆ ಕನಿಷ್ಠವೆಂದರೂ 10,00,000 ವರ್ಷಗಳಷ್ಟು ಪ್ರಾಚೀನ ಪರಂಪರೆ ಇದೆಯೆಂದು ತಿಳಿದುಬರುತ್ತದೆ. ನಾಗರಿಕತೆ ಹೆಚ್ಚೆಂದರೆ 10,000 ವರ್ಷಗಳಿಗಿಂತ ಈಚಿನದು. ಕ್ರಿ. ಪೂ. ಸುಮಾರು 10,000 ವರ್ಷಗಳ ಹಿಂದೆ ಆವತ್ತಿನ ಲೋಕದ ಎಲ್ಲೆಡೆಯ ಜನರೂ ಆಹಾರ ಸಂಗ್ರಹಣೆಯ ವಿಷಯದಲ್ಲಿ ಬಹುಶಃ ಬೇಟೆಗಾರರಾಗಿದ್ದಿರಬೇಕು ಎಂದು ದಾಖಲಿಸಿಕೊಂಡಿದ್ದಾರೆ."(ಸಂಸ್ಕೃತಿಯ ವಿಕಾಸ; 1995, ಪು. 108)

ದೇಜಪ್ಪ ದಲ್ಲೋಡಿ ಅವರು "ರಾಮಾಯಣ, ಮಹಾಭಾರತದ ಕಾಲಗಳಲ್ಲಿ ಮನುಷ್ಯರನ್ನು ಈಗಿನಂತೆ ಜಾತಿಯ ಮೂಲಕವಾಗಿ ಗುರುತಿಸಿರುವುದು ಕಂಡುಬರುತ್ತಿಲ್ಲ. ವ್ಯಕ್ತಿಯಿಂದ ಗುರುತಿಸಿರುವುದು ತಿಳಿಯುತ್ತದೆ. ಅಲ್ಲಿ ಅವರವರು ಮಾಡುವ ವೃತ್ತಿಯನ್ನು ಹೆಸರಿಸಿದೆಯಲ್ಲದೆ ಜಾತಿಯನ್ನು ಹೆಸರಿಸಿಲ್ಲ. ಆದರೆ, ಅಂದಿನ ದಿನಗಳಲ್ಲಿ ಚತುರ್ವಿಧ ವರ್ಣವ್ಯವಸ್ಥೆ ಬಹಳ ಕಟ್ಟುನಿಟ್ಟುಗಳಿಂದ ಪಾಲಿತವಾಗುತ್ತಿತ್ತು, ವೇದಕಾಲದ ಸಮಾಜದಲ್ಲಿ ಮನುಷ್ಯರೆಲ್ಲರನ್ನೂ ಸಮಾನ ರೀತಿಯಲ್ಲಿ ಕಂಡಿದ್ದ ಸ್ವಾಯಂಭುವ ಮನು ತನ್ನ ಮನುಕುಲವನ್ನು ಚತುರ್ವಿಧ ವರ್ಗ ವ್ಯವಸ್ಥೆಗಳಿಂದ ಪ್ರತ್ಯೇಕಿಸಿದ ಬಳಿಕ ಆತನ ಆ ವ್ಯವಸ್ಥೆಯೇ ಕ್ರಮೇಣ ಅವನೇ ಸೃಷ್ಟಿಸಿದ ಮನುಷ್ಯರಿಂದ ಜಾತಿ ವ್ಯವಸ್ಥೆಗಳಾಗಿ ರೂಪುಗೊಳ್ಳುವಲ್ಲಿ ರಾಮಾಯಣ, ಮಹಾಭಾರತಗಳ ಕಾಲಕ್ಕೆ ವೃತ್ತಿ ಸೂಚಕವಾಗಿ ಕಂಡು ಬಂದರೂ, ಉಚ್ಚ-ನೀಚವೆನ್ನುವ ವ್ಯವಸ್ಥೆ ಗುಣದಿಂದ

ಅದು ಜಾತಿ ವ್ಯವಸ್ಥೆಯತ್ತ ಹೆಜ್ಜೆ ಹಾಕಿರುವುದನ್ನು ಕಾಣಬಹುದಾಗಿದೆ" ಎಂದು ಉಲ್ಲೇಖಿಸಿದ್ದಾರೆ.(ಬಿಲ್ಲವ ಸಾಂಸ್ಕೃತಿಕ ಸಂಪದ; 2012, ಪು. 9)

ಭಾರತೀಯ ಸಾಂಸ್ಕೃತಿಕ ಪರಂಪರೆಯ ಮಹತ್ವವನ್ನು ಸಾರುವ ಪುರಾಣ ಗ್ರಂಥಗಳು ಜಾತಿ ವ್ಯವಸ್ಥೆಯನ್ನು ಅಲ್ಲಗಳೆದು ಮಾನವನ ಅಭ್ಯುದಯವನ್ನು ಬಯಸಿತ್ತು ಎನ್ನುವುದು ನಿಜ ಸಂಗತಿ.

ಈ ಶತಮಾನದ ಬೌದ್ಧಿಕ ಚಿಂತನೆಯಲ್ಲಿ ಸಮಾಜೋ-ಧಾರ್ಮಿಕ ಎಂಬ ಅಧ್ಯಯನ ಶಿಸ್ತು ಪ್ರಚಲಿತಕ್ಕೆ ಬಂತು. ಮಾನವಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ಜಾನಪದ, ಸಂಸ್ಕೃತಿ, ಭಾಷೆ, ಸಾಹಿತ್ಯ ಮುಂತಾದ ವಿವಿಧ ಅಧ್ಯಯನ ಕ್ರಮಗಳು ವ್ಯಾಪಕವಾಗಿ ಬೆಳೆದು ಬಂದು ಬಹು ಆಯಾಮಗಳ ಅರ್ಥವನ್ನು ಪಡೆದುಕೊಂಡಿದೆ. ನಿರ್ದಿಷ್ಟ ಪ್ರದೇಶ, ಸಮಾಜದ, ಸಮುದಾಯದ, ಭಾಷೆ, ಉಡುಗೆ-ತೊಡಿಗೆ ಆಹಾರಪದ್ಧತಿ, ಆರ್ಥಿಕತೆ, ಸಾಮಾಜಿಕ ಪಾಲ್ಗೊಳ್ಳುವಿಕೆ ಹೀಗೆ ವಿವಿಧ ನೆಲೆಗಳಲ್ಲಿ ಸಾಂಸ್ಕೃತಿಕ ಅಧ್ಯಯನಗಳು ಅನ್ವಯವಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಕೊರಗ ಸಮುದಾಯದ ಸಾಮಾಜಿಕ ಮತ್ತು ಧಾರ್ಮಿಕ ಮಹತ್ವಗಳನ್ನೂ ಜೀವನ, ವೃತ್ತಿ, ಪ್ರವೃತ್ತಿ, ಆಚರಣೆ ಅಲ್ಲದೇ ವ್ಯಾವಹಾರಿಕ ಕ್ಷೇತ್ರಗಳಲ್ಲಿ ಅವರ ತೊಡಗಿಸುವಿಕೆ ಮುಂತಾದ ವಿಚಾರಗಳನ್ನು ಮುಂದಿಟ್ಟುಕೊಂಡು ಕರಾವಳಿಯ ಸಾಂಸ್ಕೃತಿಕ ಬದುಕಿನಲ್ಲಿ ಈ ಸಮುದಾಯದ ಪಾತ್ರವನ್ನು ಈ ಬರಹದಲ್ಲಿ ಚರ್ಚಿಸಲಾಗಿದೆ.

ಮಂಗನಿಂದ ಮಾನವನ ವಿಕಾಸವಾಯಿತು ಎಂದು ಸಂಶೋಧನ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಹೇಳಿದ್ದಾನೆ. 'ಹೋಮೋ ಹೆರಕ್ಟಸ್' ಎಂಬುವುದು ಮಾನವನ ರೂಪವಾಗಿದೆ. ಅನಂತರ ಹೋಮೋ ಸೆಫಿಯನ್ಸ್ ಎಂಬ ನೇರವಾಗಿ ನಿಲ್ಲುವ ಮಾನವ ಹುಟ್ಟಿಕೊಂಡಿರುವುದು ಹದಿನೆಂಟು ಲಕ್ಷ ವರ್ಷಗಳ ಹಿಂದೆ ಎಂಬುವುದಾಗಿ ಜೀವ ವಿಜ್ಞಾನಿಗಳು ತೀರ್ಮಾನಿಸಿದ್ದಾರೆ. ಹೀಗೆ ಆಫ್ರಿಕಾ ಖಂಡದಲ್ಲಿ ವಿಕಾಸಗೊಂಡ ಆದಿ ಮಾನವನ ಮೂಲ ಕುಟುಂಬಗಳು ಸುಮಾರು ಮೂವತ್ತರಿಂದ ನಲವತ್ತು ಸಾವಿರ ವರ್ಷಗಳ ಹಿಂದೆ ಏಷ್ಯಾ ಹಾಗೂ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗಿವೆ. ಅದೇ ಸಮಯದಲ್ಲಿ ಭರತಖಂಡಕ್ಕೂ ಮಾನವ ಜೀವಿಯ ಆಗಮನ ಆಗಿರಬಹುದು. ಹಾಗೆ ಬಂದವರಲ್ಲಿ ಇಂದಿನ ತುಳುನಾಡ ಕರಾವಳಿಯಲ್ಲಿ ಮೊಟ್ಟ ಮೊದಲು ನೆಲೆಸಿದವರು 'ಕೊರ್ರು' ಅಥವಾ ಇಂದಿನ 'ಕೊರಗರು' ಜನಾಂಗ ಎಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಭಾರತಕ್ಕೆ ದ್ರಾವಿಡರ ಪ್ರವೇಶ ಹೊರನಾಡಿನಿಂದಲೇ ಎನ್ನುವುದು ವಿದ್ವಾಂಸರ ಅಭಿಪ್ರಾಯ. ಪ್ರಾಚೀನ ಕಾಲದಲ್ಲಿ ದ್ರಾವಿಡರು ವಾಯುವ್ಯ ಇರಾನಿನಲ್ಲಿ ಕ್ರಿ. ಪೂ. ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ವಾಸವಾಗಿದ್ದರು. ಅವರು ಗುಡ್ಡಗಾಡು

ಜನಾಂಗದವರಾಗಿದ್ದು ಗುಂಪು ಕಟ್ಟಿಕೊಂಡು ಸಂಚರಿಸುತ್ತ ಭಾರತದ ವಾಯುವ್ಯದೆಡೆಗೆ ಪಸರಿಸಿದರು. ಆರ್ಯರ ಪ್ರವೇಶದೊಂದಿಗೆ ದ್ರಾವಿಡರು ದಕ್ಷಿಣ ಭಾರತದೆಡೆಗೆ ಸಂಚಾರ ಮಾಡಿರಬೇಕು ಎಂಬ ಚರ್ಚೆ ವಿದ್ವಾಂಸರಲ್ಲಿದೆ.

**'ಕೊರಗ' ಪದ ನಿಷ್ಪತ್ತಿ:**

'ಕೊರಗ' ಎನ್ನುವ ಪದವು ತುಳು ಮೂಲದಿಂದ ಬಂದಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. 'ಕೊರ' ಎಂದರೆ ಸೂರ್ಯ ಎನ್ನುವ ಅರ್ಥ ಬರುವುದರಿಂದ ಮತ್ತು ಇವರು ಸೂರ್ಯದೇವನ ಆರಾಧಕರಾದ್ದರಿಂದ ಈ ಪದ ಬಳಕೆಯಾಗಿದೆ ಎಂದು ನಂಬಲಾಗಿದೆ.

ಕೊರಗ ಸಮುದಾಯದ ಕುರಿತಾಗಿ ಕಿರು ಅಧ್ಯಯನ ಮಾಡಿರುವ ಪುರುಷೋತ್ತಮ ಬಿಳಿಮಲೆ ಇವರು "ನಾವು 'ಕೊರಗರು' ಎಂದು ಕರೆಯುವ ಜನಸಮುದಾಯವನ್ನು ಕ್ಯಾಂಪ್‌ಬೆಲ್ಲನು (Campbell) ಕೊರಸ್' ಅಥವಾ ಕೊರಗರ್' ಎಂದು ಕರೆದಿದ್ದಾನೆ. ಬುಕನನ್‌ನು ಕೊರರ್' ಅಥವಾ ಕೊರವರ್' ಎಂದು ಉಲ್ಲೇಖಿಸಿದ್ದಾನೆ. ಈ ವಿದ್ವಾಂಸರು ಬಳಸಿದ ಪದಗಳನ್ನು ನೋಡಿದರೆ ಕೊರಗ' ಎಂಬುದೇ ಮೂಲ ಪದವಾಗಿರುವುದು ಸ್ಪಷ್ಟ. ತುಳುವಿನಲ್ಲಿ ಕೊರಗ' ಎಂಬ ಪ್ರಯೋಗವಿದೆ. ಕೊಂಕಣಿಯಲ್ಲಿ ಕೊರಗೋ' ಎಂಬ ಪದವಿದೆ" ಎಂದು ಪ್ರಸ್ತಾಪಿಸಿದ್ದಾರೆ.(ಕೊರಗರ ಸಂಸ್ಕೃತಿ; 1993, ಪು. 25) ಅಯ್ಯಪ್ಪನ್ ಎಂಬ ವಿದ್ವಾಂಸನ ಪ್ರಕಾರ 'ಕೊರಗ' ಪದವು 'ಕುರುವರ್' ಎಂದರೆ ಬೆಟ್ಟದಲ್ಲಿ ವಾಸಿಸುವವರು ಎಂದರ್ಥದಲ್ಲಿ ಬಳಸಿದ್ದಾನೆ.(ಅದೇ) ಸತೀಶ್ ಕಾಳವರ್ಕರ್ ಎನ್ನುವವರು ಕೊರಗರದ್ದು 'ಸೂರ್ಯಸಿದ್ಧಾಂತ' ಎಂದು ಅಭಿಪ್ರಾಯಪಟ್ಟಿದ್ದಾರೆ. ಇವರು ಕೊರಗ ಸಮುದಾಯದ ಪ್ರಸ್ತುತ ಕರಾವಳಿಯ ಜನಮಾನಸದಲ್ಲಿ ಭಯ ಭಕ್ತಿಯಿಂದ ಆರಾಧನೆಗೊಳ್ಳುವ 'ಕೊರಗಜ್ಜ' ದೈವದ ಕುರಿತು ಉಲ್ಲೇಖಿಸುತ್ತಾ 'ಕೊರಗಜ್ಜ' ಎನ್ನುವುದು 'ಕೋರ' ಎಂಬ ಸಂಸ್ಕೃತ ಪದ ಕೋರ (ಕೋರ=ಸೂರ್ಯ+ಖಗ(ಖ ಗೋಲ)+ಅಜ(ಹುಟ್ಟಿದವ)= 'ಕೊರಖಗಜ' ಎಂದಾಗಿ ಇದು ಅಪಭ್ರಂಶಗೊಂಡು 'ಕೊರಗಜ್ಜ' ಎಂದಾಯಿತು ಎಂದಿದ್ದಾರೆ. ಆದರೆ ಕೊರಗ ಸಮುದಾಯದವರು ಕೊರಗಜ್ಜನನ್ನು ಆ ಪದದಿಂದ ಗುರುತಿಸದೆ 'ಕೊರಗ ತನಿಯ' ಅಂದರೆ ಸೂರ್ಯನ ಪುತ್ರ 'ಶನಿ' ತದ್ಭವರೂಪವಾಗಿ 'ತನಿ'ಯನಾಗಿದ್ದಾನೆ ಎಂದಿದ್ದಾರೆ.([https://www.youtube.com/watch?v=bkSeryqXt0] (https://www.youtube.com/watch?v=bkSeryqXt0)) ಪುರುಷೋತ್ತಮ ಬಿಳಿಮಲೆಯವರು ಲಾರೆನ್ಸ್ ಡಿ ಸೋಜಾರ ಮಾತನ್ನು ಉಲ್ಲೇಖಿಸುತ್ತಾ ಕೊರ' ಎಂಬ ಪದವು ದಕ್ಷಿಣ ಭಾರತದ ಅನೇಕ ಬುಡಕಟ್ಟು ಜನಾಂಗಗಳಲ್ಲಿ ಕಾಣಿಸಿಕೊಂಡಿದ್ದು ಅದಕ್ಕೆ ಸೂರ್ಯ'

ಎಂಬರ್ಥವಿದೆ. ಈ ಹಿನ್ನೆಲೆಯಲ್ಲಿ ಸೂರ್ಯನ ಆರಾಧಕರು ಎಂಬರ್ಥದಲ್ಲಿ 'ಕೊರಗ' ಪದ ಸೃಷ್ಟಿಯಾಗಿರಬಹುದು ಎಂಬ ವಾದವಿದೆ ಎಂದಿದ್ದಾರೆ.(ಕೊರಗರ ಸಂಸ್ಕೃತಿ; ಪು. 26) ಕೊರಗ ಸಮುದಾಯದ ಹಿರಿಯ ಚಿಂತಕರಾದ ಬಾಲ್‌ರಾಜ್ ಕೋಡಿಕಲ್‌ರವರ ಪ್ರಕಾರ 'ಕೊರ್ರು' ಎಂಬ ಪದವು ಕುರೆ' ಎಂಬ ಮೂಲ ಪದದಿಂದ ಬಂದಿದೆ. 'ಕುರೆ' ಎಂದರೆ ಕೊರಗ ಭಾಷೆಯಲ್ಲಿ 'ಬುಟ್ಟಿ' ಎನ್ನುವ ಅರ್ಥವಿದೆ. ಆದುದರಿಂದ ಕುರೆ (ಬುಟ್ಟಿ) ಮಾಡುವವರು ಕೊರ್ರು ಆದರು. ಕ್ರಮೇಣ ಕೊರ್ರುಗ=ಕೊರಗ ಆಗಿ ಪರಿವರ್ತನೆಯಾಗಿ ಚಾಲ್ತಿಗೆ ಬಂತು ಎನ್ನುವ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ.

**ಕೊರಗರ ಮೂಲ:**

ಆದಿವಾಸಿ ಎಂದರೆ ಮೂಲ ನಿವಾಸಿ ಎಂದರ್ಥ. ಊಹಿಸಲಾಗದ ಕಾಲದಿಂದಲೇ ಈ ಭೂಮಿಯ ಮೇಲೆ ವಾಸಿಸುತ್ತಿದ್ದವರು. ಸ್ವತಂತ್ರ ಭಾಷೆ ಮತ್ತು ಸಾಮಾಜಿಕ ಆಚಾರಣೆಗಳನ್ನು ಹೊಂದಿದ್ದು ಬೇಟೆ, ಆಹಾರ ಮತ್ತು ಕಾಡುತ್ಪತ್ತಿಗಳ ಸಂಗ್ರಹಣೆ ಇದರ ಮುಖ್ಯ ಕಸುಬು ಆಗಿತ್ತು. ಭಾರತದ ಇತಿಹಾಸದ ಪ್ರಕಾರ ಈ ಆದಿವಾಸಿ ಬುಡಕಟ್ಟು ಜನಾಂಗಗಳು ಬ್ರಿಟಿಷರ ಆಳ್ವಿಕೆಯಲ್ಲಿ ಎಲ್ಲೂ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ದಟ್ಟವಾದ ಕಾಡುಗಳಲ್ಲಿ ಅಲೆದಾಟದೊಂದಿಗಿನ ಜೀವನವನ್ನು ನಡೆಸುತ್ತಿದ್ದರು.

ಕೊರಗರಲ್ಲಿ ನಾನು' ಎಂಬ ಭಾವನೆ ಇಲ್ಲ. ನಮ್ಮ ಸಮುದಾಯ' ಎಂಬ ಭಾವನೆಯೇ ಈ ಆದಿವಾಸಿಗಳ ಮುಖ್ಯ ಲಕ್ಷಣವಾಗಿದೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಆದಿ ಕಾಲದಿಂದಲೂ ವಾಸವಿರುವ ಕೊರಗರು ಅಥವಾ ಕೊರ್ರು ಈ ಪ್ರದೇಶದ ಮೂಲ ನಿವಾಸಿಗಳಾಗಿದ್ದಾರೆ. ಪ್ರತ್ಯೇಕವಾದ ಸ್ವತಂತ್ರ ಭಾಷೆ, ಸಂಸ್ಕೃತಿ, ಆಚರಣೆಗಳನ್ನು ಹೊಂದಿರುವ ಈ ಕೊರಗರು ಆದಿಮೂಲ ಬುಡಕಟ್ಟು ಜನಾಂಗದವರಾಗಿರುತ್ತಾರೆ. ಕರಾವಳಿ ಪ್ರದೇಶವು ದಟ್ಟ ಅರಣ್ಯವಾಗಿದ್ದ ಈ ಕಾಲದಲ್ಲಿ ಇವರು ಇಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರಬಹುದು. ಮೇಲ್ನೋಟಕ್ಕೆ ಆಫ್ರಿಕಾ ಖಂಡದ ನೀಗ್ರೋ ಸಮುದಾಯದ ಚಹರೆಯಂತೆ ಗುಂಗುರು ಕೂದಲು, ಹೊಳೆಯುವ ಕಪ್ಪು ಮೈ ಬಣ್ಣ, ಅಗಲವಾದ ಹಣೆ, ದಪ್ಪ ತುಟಿ, ಚಪ್ಪಟೆ ಮೂಗು ಹಾಗೂ ಬಲಿಷ್ಠ ಕಾಯವನ್ನು ಹೊಂದಿದ್ದರು. ಆದರೆ ಈಗ ಪ್ರಕೃತಿಗೆ ಅನುಗುಣವಾಗಿ ಇಂದು ಇತರ ಭಾರತೀಯರಂತೆ ದೈಹಿಕ ಲಕ್ಷಣಗಳನ್ನು ಹೋಲುತ್ತಾರೆ.

ತುಳುನಾಡಿನಲ್ಲಿ ವಾಸವಾಗಿರುವ ಮೂಲ ದ್ರಾವಿಡರ ಮುಖ್ಯ ಕವಲು ಎಂದು ಗುರುತಿಸಿಕೊಂಡಿರುವ ಕೊರಗ ಜನಾಂಗದ ಬಗ್ಗೆ 1894ರಲ್ಲಿ ಸ್ಟರಕ್ ಹಾಗೂ ವಾಲ್‌ಹೌಸ್ (1875) ಜಿಲ್ಲಾ ಮ್ಯಾನ್ಯುವಲ್‌ಗಳಿಗೆ (ವರದಿ)ಗಳ ರಚನೆಯ

ಸಂದರ್ಭದಲ್ಲಿ ಮಾಹಿತಿಗಳನ್ನು ನೀಡಿದ್ದಾರೆ. ಒಂದು ಶತಮಾನದ ಹಿಂದೆ ಕೊರಗ ಸಮುದಾಯದ ಜೀವನ ವಿವರಗಳು ಇದರಲ್ಲಿ ದಾಖಲಾಗಿವೆ.

1886ರಲ್ಲಿ ಉಳ್ಳಾಲ ರಾಘವೇಂದ್ರ ರಾವ್ ಅವರು ಮದರಾಸು ಕ್ರಿಶ್ಚಿಯನ್ ಕಾಲೇಜಿನ ಮ್ಯಾಗ್‌ಜಿನ್‌ನಲ್ಲಿ ಬರೆದ 'ಕೊರಗರು' ಎಂಬ ಇಂಗ್ಲಿಷ್ ಲೇಖನ ಕೊರಗ ಸಮುದಾಯದ ಸಾಮೂಹಿಕ ಚಹರೆಯನ್ನು ಅತ್ಯಂತ ಅಧಿಕೃತವಾಗಿ ದಾಖಲಿಸಿದೆ.

ಮೂಲದಲ್ಲಿ ಒಂದೇ ಮೂಲಕ್ಕೆ ಸೇರಿದವರಾಗಿದ್ದರೂ ತಾವು ನೆಲೆಸಿದ ಪ್ರದೇಶ, ಕಾಲ, ಸಂದರ್ಭ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಒಳಗಾಗಿ ಸಮುದಾಯದಲ್ಲಿ ಹಲವು ಪಂಗಡಗಳು ಹುಟ್ಟಿಕೊಂಡಿವೆ. ಈ ಉಪಪಂಗಡಗಳ ಮೇಲೆ ಅಲ್ಲಿನ ಸ್ಥಳೀಯ ಪರಿಸರ ಹಾಗೂ ಇತರ ಜನ ಸಮುದಾಯಗಳ ಪ್ರಭಾವ ಮತ್ತು ಪ್ರೇರಣೆಗೆ ಒಳಗಾಗಿ ಭಿನ್ನವೆಂಬಂತೆ ತೋರುವುದು ಸಹಜ. ಹಾಗೆಯೇ ಈ ಅಂಶಗಳೇ ಕೊರಗರಲ್ಲಿ ಹಲವು ಒಳಪಂಗಡಗಳಲ್ಲಿ ಹುಟ್ಟಿಕೊಳ್ಳಲು ಕಾರಣವಾಗಿರಬಹುದು. ಕೊರಗರ ಕುರಿತು ಅಧ್ಯಯನ ಮಾಡಿರುವ ಹಲವು ಸಂಶೋಧಕರು ಹಲವು ಪಂಗಡಗಳಿವೆ ಎಂದು ಉಲ್ಲೇಖಿಸಿದ್ದಾರೆ. ಥರ್ಸ್ಟನ್, ವಾಲ್‌ಹೌಸ್, ಸ್ಟುವರ್ಟ್ ಮುಂತಾದ ವಿದ್ವಾಂಸರುಗಳು ಕೊರಗರಲ್ಲಿ 1) ಸೊಪ್ಪು ಕೊರಗರು 2) ಚಿಪ್ಪು ಕೊರಗರು 3) ಅಂಡೆ ಕೊರಗರು 4) ಮುಂಡು ಕೊರಗರು ಎನ್ನುವ ಒಳ ಪಂಗಡಗಳಿವೆ ಎಂದು ಹೇಳಿದ್ದಾರೆ. ಆದರೆ ಪ್ರಸ್ತುತ ಕೊರಗ ಸಮುದಾಯದವರು ಈ ಮೇಲೆ ಹೆಸರಿಸಿದ ಕೆಲವು ಪಂಗಡಗಳನ್ನು ಒಪ್ಪಿಕೊಳ್ಳುವುದಿಲ್ಲ.

**ಕೆಲವು ಐತಿಹ್ಯಗಳು:**

ಕೊರಗ ಸಮುದಾಯದ ಸೃಷ್ಟಿ ಪುರಾಣ ಹಾಗೂ ಮೂಲ ಇತಿಹಾಸಗಳನ್ನು ಕಟ್ಟಿಕೊಳ್ಳುವುದಕ್ಕೆ ಪೂರಕವಾಗಿ ಮೌಖಿಕ ಪುರಾಣಗಳು ಬಲಿಷ್ಠವಾಗಿದೆ. ಇವರ ಸೃಷ್ಟಿ ಮೂಲವನ್ನು ತಿಳಿಸುವ ಜಲ ಪ್ರಳಯದ ಕತೆಯೊಂದು ಈ ಸಮುದಾಯದಲ್ಲಿ ಜನಜನಿತವಾಗಿದೆ.

ಒಂದಾನೊಂದು ಕಾಲದಲ್ಲಿ ಈ ಭೂಮಿಯ ಮೇಲೆ ಭಾರೀ ಜಲ ಪ್ರಳಯವೊಂದು ಸಂಭವಿಸುತ್ತದೆ. ಎತ್ತ ನೋಡಿದರೂ ನೀರೇ ನೀರು. ಸಕಲ ಜೀವರಾಶಿಗಳೂ ಮುಳುಗಿ ನಾಶವಾಗುವುದರಲ್ಲಿತ್ತಂತೆ. ಆದರೆ ಅದೇ ವೇಳೆ ಅದೆಲ್ಲಿಂದಲೋ ಒಂದು ಡೋಲು ನೀರಿನಲ್ಲಿ ತೇಲುತ್ತಾ ಬರುತ್ತದೆ. ಆ ಡೋಲಿನ ಒಳಗಡೆ ಒಂದು ಗಂಡು ಒಂದು ಹೆಣ್ಣು ಆಶ್ರಯ ಪಡೆಯುತ್ತಿದ್ದರಂತೆ. ಆಗ ಅವರಿಗೆ ಅಶರೀರವಾಣಿಯೊಂದು ಕೇಳಿ ಬರುತ್ತದೆ. ಆ ನಂತರ ಅವರಿಬ್ಬರು ದೇಹ ಸಂಪರ್ಕ ಹೊಂದಿದರು. ನೀರು ಇಳಿದು ಕ್ರಮೇಣ ಇವರು ಮಕ್ಕಳನ್ನು ಪಡೆದರು. ಮುಂದೆ ಈ ಮಕ್ಕಳೇ ಬೇರೆ ಬೇರೆ ಉದ್ಯೋಗಗಳನ್ನು ಪಡೆದು ಬೇರೆ ಬೇರೆ ಜಾತಿಗಳಾದವರು.

ಇದೊಂದು ಕೊರಗರ ಬಾಯಿಂದ ಬಾಯಿಗೆ ಹರಿದು ಬಂದಿರುವ ಕತೆ.

ಆದರೆ ಈ ದಂತಕತೆಯನ್ನು ವಾಸ್ತವತೆಗೆ ಭಟ್ಟಿಯಿಳಿಸಿ ನೋಡಿದಾಗ ಅಂದು ಅರಬ್ಬೀ ಸಮುದ್ರದಲ್ಲಿ ಭಾರೀ ಸುನಾಮಿಯೊಂದು ಕರಾವಳಿಗೆ ಅಪ್ಪಳಿಸಿ ಜಲ ಪ್ರಳಯದಂತಹ ಸೃಷ್ಟಿಯಾಗಿರಬಹುದು ಎಂದೆನಿಸುತ್ತದೆ. ಪೂರ್ತಿ ಪ್ರಪಂಚದ ಅರಿವಿರದ ಈ ಭಾಗದ ಆದಿವಾಸಿ ಕೊರ್ರು (ಕೊರಗರು) ಇಡೀ ಭೂಮಿಯೇ ಮುಳುಗಿದೆ ಎಂದು ಭಾವಿಸಿರಬಹುದು. ಅಲ್ಲದೆ ಆಗ ಪ್ರಾಣ ಭಯದಿಂದ ನೀರಲ್ಲಿ ಮುಳುಗೇಳುತ್ತಿದ್ದ ಈ ಇಬ್ಬರಿಗೆ ತಮ್ಮವರದ್ದೇ ಆದ ಡೋಲು ಆಸರೆಯಾಗಿ ಸಿಕ್ಕಿರಬಹುದು. ಅವರಿಬ್ಬರೇ ಹಲವು ದಿನಗಳ ಕಾಲ ಡೋಲಿನ ಅಂಡೆಯ ಒಳಗೆ ಇದ್ದಾಗ ಮನಸ್ಸಿನ ನಿಯಂತ್ರಣ ಕಳೆದುಕೊಳ್ಳುವುದು ಸಹಜವೇ ಆಗಿರಬಹುದು. ಕ್ಷಣಕಾಲ ಎಲ್ಲವನ್ನು ಮರೆತು ಸಹಜ ಲೈಂಗಿಕ ವಾಂಛೆಗೆ ಒಳಗಾಗಿರಬಹುದು. ನೀರೆಲ್ಲ ಇಳಿದ ಮೇಲೆ ಇವರು ಹೊಸದಾಗಿ ಸಂಸಾರ ನಡೆಸಿ ಮಕ್ಕಳನ್ನು ಪಡೆದರು.

**ಐತಿಹಾಸಿಕ ದಾಖಲೆ:**

ಇತಿಹಾಸವೆಂದರೆ ಗತಕಾಲದ ರಾಜಕೀಯ ಚಟುವಟಿಕೆಗಳು ಅಥವಾ ಘಟನಾವಳಿಗಳು ಎಂಬುದು ತಜ್ಞರ ಅಭಿಪ್ರಾಯ. ಆದರೆ ಕಾಡಾಡಿಗಳಾಗಿದ್ದ ಬುಡಕಟ್ಟು ಕೊರಗರ ಇತಿಹಾಸವನ್ನು ಗಮನಿಸಿದಾಗ ಸ್ವಾತಂತ್ರ್ಯ ಪೂರ್ವದಲ್ಲಿ ಹೇಗಿದ್ದರು? ಏನು ಮಾಡುತ್ತಿದ್ದರು? ಎಂಬುವುದರ ಬಗ್ಗೆ ಖಚಿತ ಮಾಹಿತಿಗಳು ದೊರೆಯುವುದಿಲ್ಲ. ಕ್ಯಾಂಬೆಲ್, ಸ್ಟರಕ್, ವಾಲ್ ಹೌಸ್, ಮೊದಲಾದ ವಿದೇಶಿ ಇತಿಹಾಸಕಾರರು ಈ ಸಮುದಾಯದ ಇತಿಹಾಸದ ಬಗ್ಗೆ ಒಂದಷ್ಟು ಬೆಳಕು ಚೆಲ್ಲುವ ಪ್ರಯತ್ನಗಳನ್ನು ಮಾಡಿದ್ದಾರೆ.

ಇವರ ಒಟ್ಟು ಅನಿಸಿಕೆ, ಅಭಿಪ್ರಾಯಗಳನ್ನು ಆಧರಿಸಿ ಹೀಗೆ ಹೇಳಬಹುದು. ಮಲೆನಾಡಿನ ಅನಂತಪುರ ಅರಣ್ಯ ಪ್ರದೇಶದಲ್ಲಿ ಕ್ರಿ.ಶ. 450ರ ಸುಮಾರಿಗೆ ಉಬಸ್ (ಹುಬಾಷ್) ಅಥವಾ ಉಬಸಿಕ ಎನ್ನುವ ಕೊರಗರ ಬಲಿಷ್ಠ ಗುರಿಕಾರ (ನಾಯಕ) ಇದ್ದನು. ಕ್ರಮೇಣ ಆತ ಕರಾವಳಿಯ ಅಂದಿನ ಪ್ರಬಲ ಕೊರಗ ತಾಣ ವಾರಕನೂರು (ಬಾರಕೂರು) ಬಲೆಪಿಗೆ ಬಂದು ಅಲ್ಲಿನ ಕೊರಗರೊಂದಿಗೆ ಒಪ್ಪಂದ ಮಾಡಿಕೊಂಡನು. ಹಾಗೂ ಕೆಲವು ಕಾಲ ಕೊರಗರ ನಾಡನ್ನು (ಕಾಡು) ಆಳಿದ್ದನು. ಈ ಸಂದರ್ಭದಲ್ಲಿ ಉತ್ತರದ ಬನವಾಸಿ ಕಡೆಯಿಂದ ಕದಂಬರು ಸಾಮ್ರಾಜ್ಯವನ್ನು ವಿಸ್ತರಿಸುವ ಪ್ರಯತ್ನದಲ್ಲಿದ್ದರು. ಬೈಂದೂರು ದಾಟಿ ಬಾರ್ಕೂರಿಗೆ ದಾಳಿ ಮಾಡುವ ಸೂಚನೆ ನೀಡಿದ್ದರು. ಸ್ವತಃ ಮಯೂರವರ್ಮನೇ ದಂಡೆತ್ತಿ ಬಂದನು. ಆಗ ಉಬಸಿಕನ ನಾಯಕತ್ವದಲ್ಲಿ ಕೊರಗರು ಒಗ್ಗೂಡಿ ಹೋರಾಡಿದರು. ಪರಿಣಾಮವಾಗಿ ಮಯೂರವರ್ಮ ಸೋತು ಸೈನ್ಯ ಸಮೇತ ಹಿಂದಿರುಗಿದನು. ಈ ಘಟನೆಯ ಬಳಿಕ

ಕೊರಗರು ಅರಣ್ಯದ ಉತ್ತರ ಪ್ರದೇಶದಲ್ಲಿ ಒಂದು ಕಣ್ಗಾವಲು ಕೋಟೆಯನ್ನು ನಿರ್ಮಿಸಿದರು. ಇದೇ ಮುಂದೆ 'ಕ್ವರ್ರು ಕೋಟೆ' (ಕೊರಗರ ಕೋಟೆ) ಎಂದು ಪ್ರಸಿದ್ಧಿಯಾಯಿತು.

ತದನಂತರ ಉಬಸಿಕನು ದಕ್ಷಿಣದ ಕೊರಗರ ಯೋಗಕ್ಷೇಮ ವಿಚಾರಿಸುವುದಕ್ಕಾಗಿ ಯಾತ್ರೆ ಕೈಗೊಂಡನು. ಆದರೆ ಅದೇ ವೇಳೆ ಅವನಿಗೆ ಮಾರಕ ಹಳದಿ ಕಾಯಿಲೆ ಕಾಣಿಸಿಕೊಂಡಿತು. ಆದುದರಿಂದ ಅವನು ಮಂಗಳೂರಿನಲ್ಲಿ (ಈಗಿನ ಪಣಂಬೂರು) ಕೆಲವು ಸಮಯ ತಂಗಿ ಅಲ್ಲಿನ ಕೊರಗರಿಂದ ಆರೈಕೆ ಪಡೆದನು. ಕೊನೆಗೆ ಮಂಜೇಶ್ವರದ ಕಡೆಗೆ ಪಾದಯಾತ್ರೆ ಮಾಡಿದನು. ಮಂಜೇಶ್ವರದಲ್ಲಿ ತನ್ನ ಸೋದರಳಿಯ ಸಿದ್ದಬೈರುವನ್ನು ಗುರಿಕಾರನನ್ನಾಗಿ ನೇಮಕ ಮಾಡಿದನು. ಸಿದ್ದಬೈರು ಹನ್ನೆರಡು ವರ್ಷಗಳ ಕಾಲ ಗುರಿಕಾರಿಕೆ ನಡೆಸಿದನು. ಅತ್ತ ಉಬಸಿಕನನ್ನು ಮುಗಿಸಲು ಅವಮಾನಿತ ಬನವಾಸಿಯ ಕ್ಷತ್ರೀಯರು ಉಪಾಯ ಮಾಡುತ್ತಲೇ ಇದ್ದರು. ಅವರು ವೀರವರ್ಮನ ಮಗ ಅಂಗಾರವರ್ಮನನ್ನು ಸಂಧಾನಕ್ಕೆಂದು ಕಳುಹಿಸಿ ಉಬಸಿಕನಿಗೆ ಬ್ರಾಹ್ಮಣ ಕನ್ಯೆಯೊಂದಿಗೆ ಮದುವೆ ಮಾಡುವ ಆಮಿಷ ತೋರಿಸಿದರು. ಬ್ರಾಹ್ಮಣರ ಕುಟಿಲತೆಯನ್ನು ಅರಿಯದ ಕಾಡಿನ ಗುರಿಕಾರ ಉಬಸಿಕ ಮದುವೆಗೆ ಒಪ್ಪಿಕೊಂಡನು. ಆತ ಮದುವೆಯ ದಿನ ದಿಬ್ಬಣದೊಂದಿಗೆ ಮಂಜೇಶ್ವರಕ್ಕೆ ಬಂದಾಗ ಅಂಗಳದ ತುಂಬ ನೆಲ್ಲಿಕಾಯಿ ಹರಡಿ ಅದರ ಮೇಲೆ ಚಾಪೆ ಹಾಸಿದ್ದರು. ಅದನ್ನು ಅರಿಯದ ಮದುಮಗ ಚಾಪೆಯ ಮೇಲೆ ಕಾಲಿಟ್ಟು ಮುನ್ನಡೆದಾಗ ಎಡವಿ ಬಿದ್ದನು. ಅದನ್ನೇ ಕಾಯುತ್ತಿದ್ದ ಅಂಗಾರವರ್ಮನ ಸೈನಿಕರು ಆತನನ್ನು ಬಂಧಿಸಿ ಸಾರ್ವಜನಿಕವಾಗಿ ಥಳಿಸಿ ಮರದ ಕೊಂಬೆಗೆ ನೇಣು ಹಾಕಿದರು. ದಿಬ್ಬಣದೊಂದಿಗೆ ತೆರಳಿದ್ದ ನೂರಾರು ಕೊರಗರನ್ನು ವಿವಸ್ತ್ರಗೊಳಿಸಿ ಥಳಿಸಿದರು. ಕೆಲವರನ್ನು ಕೊಂದರು. ಚಿತ್ರಹಿಂಸೆ ನೀಡಿ ಕಾಡಿಗೆ ಓಡಿಸಿದರು. ಬಡಗಣ ಬನವಾಸಿಯಿಂದ ತೆಂಕಣ ನೀಲೇಶ್ವರದವರೆಗಿನ ಅರಣ್ಯದಲ್ಲಿದ್ದ ಕೊರಗರನ್ನು ಹುಡುಕಿ ಕೊಂದರು. ಅವರ ಕಣ್ಣು ತಪ್ಪಿಸಿ ಉಳಿದ ಕೊರಗರು ದಿಕ್ಕಾಪಾಲಾಗಿ ಓಡಿದರು. ಇಲ್ಲಿಂದ ಮುಂದೆ ಕೊರಗರ ಅವನತಿಯ ಕಾಲ ಆರಂಭವಾಯಿತು.

**ಕೊರಗರ ಸೃಷ್ಟಿ ಪುರಾಣ:**

ಆದಿಯಲ್ಲಿ ಈ ಪ್ರಪಂಚದಲ್ಲಿ ಭೂಮಿಯೆಂಬುದು ಇರಲಿಲ್ಲ. ಎಲ್ಲೆಲ್ಲೋ ನೀರು ತುಂಬಿ ಜಲಾವೃತವಾಗಿತ್ತು. ಆ ನೀರಿನಲ್ಲಿ ಒಂದು ಗಂಡು ಮತ್ತು ಹೆಣ್ಣು ಎರಡು ಬೆತ್ತಲೆ ಜೀವಗಳು ಕಾಣಿಸಿಕೊಂಡವು. ಅದನ್ನು ನಾರಾಯಣ ದೇವರು ನೋಡಿದರು. ಮಾಯೆಯಿಂದ ಒಂದು ಡೋಲಿನ ಕಳಸೆಯನ್ನು ಮಾಡಿ ಆ ನೀರಿನಲ್ಲಿ ತೇಲಿಬಿಟ್ಟರು. ಆ ಎರಡು ಜೀವಗಳು ಡೋಲಿನಲ್ಲಿ ಆಶ್ರಯ ಪಡೆದವು.

ನಾರಾಯಣ ದೇವರು ತನ್ನಲ್ಲಿಗೆ ಅವರನ್ನು ಕರೆಸಿದರು. ನೀವು ಯಾರು?

ಎಂದು ಕೇಳಿದರು. ನಿಮಗೆ ಏನು ಬೇಕು ಕೇಳಿ' ಎಂದರು. ಅಣ್ಣ-ತಂಗಿ ತಮಗೆ ಏನೂ ಬೇಡ ಎಂದರು. ನಾರಾಯಣ ದೇವರು ಹೊರಟು ಹೋದರು. ಹೀಗೆ ಎರಡು ಬಾರಿ ನಡೆಯಿತು. ಮೂರನೇ ಬಾರಿ ಮತ್ತು ನಾರಾಯಣ ದೇವರು ಬಂದು ಈ ಡೋಲಿನಲ್ಲಿರಲು ನಿಮಗೆ ಬೇಸರವಾಗುವುದಿಲ್ಲವೇ? ನಿಮಗೆ ಪ್ರಪಂಚ ಬೇಡವೇ' ಎಂದು ಅಣ್ಣ ತಂಗಿಯರಲ್ಲಿ ಬಯಕೆ' ಹುಟ್ಟಿಸಿದರು. ಸೊಪ್ಪು ಉಡಿಸಿದರು. ಅಣ್ಣ - ತಂಗಿ ಕೂಡಿದರು ಆಗ ಭೂಮಿಯಾಯಿತು. ಅವರ ಆಸೆಯಂತೆ ಎಲ್ಲವೂ ಸೃಷ್ಟಿಯಾಯಿತು.(ಎಚ್. ಜಿ. ಲಕ್ಕಪ್ಪಗೌಡ 1998, 272)

ಕರಾವಳಿ ಕರ್ನಾಟಕದ ಕೊರಗರು ಬುಡಕಟ್ಟಿನ ಎಲ್ಲ ಸ್ವರೂಪ ಲಕ್ಷಣಗಳನ್ನು ಹೊಂದಿರುವ ಒಂದು ಜನವರ್ಗ. ಕೊರಗರನ್ನು ದಕ್ಷಿಣ ಭಾರತದ ಅತ್ಯಂತ ಹಿಂದುಳಿದ ಜನವರ್ಗವಾಗಿ ಗುರುತಿಸಲಾಗುತ್ತಿದೆ. ಕರ್ನಾಟಕ ಸರ್ಕಾರ ಇವರನ್ನು 'ಪರಿಶಿಷ್ಟ ವರ್ಗ' ಎಂದು ಕರೆದಿದೆ. ಭಾರತ ಸರ್ಕಾರ 1950ರಲ್ಲಿ ಕೊರಗರನ್ನು ಪರಿಶಿಷ್ಟ ಜಾತಿ ಎಂದು ಕರೆದರೆ, 1956ರಲ್ಲಿ ರಾಷ್ಟ್ರಪತಿಯವರ ಆದೇಶದಂತೆ ಪರಿಶಿಷ್ಟ ವರ್ಗವೆಂದು ಘೋಷಿಸಿದ್ದು 1985-86ರ ಸಾಲಿನಿಂದ ಕೊರಗರನ್ನು ದಕ್ಷಿಣ ಕನ್ನಡ ಜಿಲ್ಲೆಯ ಆದಿವಾಸಿ ಬುಡಕಟ್ಟು ಎಂಬುದಾಗಿ ಸರ್ಕಾರ ಪರಿಗಣಿಸಿದೆ.

**ಪರಾಮರ್ಶನ ಗ್ರಂಥಗಳು:**


1. ತಪಸ್ವೀಕುಮಾರ್ ನಂ., (1995), ಸಂಸ್ಕೃತಿಯ ವಿಕಾಸ; ಭಾರತೀ ಪ್ರಕಾಶನ, ಮೈಸೂರು.
2. ದೇಜಪ್ಪ ದಲ್ಲೋಡಿ, (2012), ಬಿಲ್ಲವ ಸಾಂಸ್ಕೃತಿಕ, ಸಂಪದ, ಮಂಗಳೂರು.
3. ಪುರುಷೋತ್ತಮ ಬಿಳಿಮಲೆ, (1993), ಕೊರಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
4. ಶೇಷಗಿರಿ ರಾವ್ ಎಲ್.ಎಸ್. (ಅನು), (2015), ಭಗವದ್ಗೀತಾ ಯಥಾರೂಪ, ಭಕ್ತಿವೇದಾಂತ ಬುಕ್ ಟ್ರಸ್ಟ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.